


**ಡಾ. ಬಿ.ಎಸ್. ಅನಿಲ ಕುಮಾರ**
ಬಿ.ಇಡಿ., ಎಂ.ಎ., ಪಿಎಚ್.ಡಿ.
ಸಹ ನಿರ್ದೇಶಕ, ಪ್ರಸಾರಾಂಗ,
ಎಲ್ – 11, 8ನೇ ಅಡ್ಡರಸ್ತೆ, ಡಾ. ಚದುರಂಗ ರಸ್ತೆ,
ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ,
ಮೈಸೂರು – 570 006,
ದೂರವಾಣಿ: 9902400588 E-Mail: anilshanbog@gmail.com


**ಆತ್ಮೀಯರೇ, ತಮಗೆ ಪ್ರೀತಿಯ ನಮನ ಪೂರ್ವಕ ಶುಭಾಶಯಗಳು.** ದಿನಾಂಕ: 01.01.2024

ಕನ್ನಡ ಭಕ್ತಿ ಪರಂಪರೆಯ ಹಿನ್ನಲೆಯಲ್ಲಿ ಗಮನಿಸುವುದಾದರೆ ಹರಿದಾಸ ಸಂಸ್ಕೃತಿ ಕರ್ನಾಟಕದ ನಡುಗನ್ನಡ ಕಾಲಘಟ್ಟದ ಪ್ರಮುಖ ಸಾಹಿತ್ಯ ಸಂಸ್ಕೃತಿಯಾಗಿದೆ. **ಶ್ರೀಮಧ್ವಾಚಾರ್ಯರ** ದ್ವಾದಶಸ್ತೋತ್ರದಿಂದ ಪ್ರೇರಣೆಗೊಂಡು **ಶ್ರೀನರಹರಿತೀರ್ಥ**ರಿಂದ ಆರಂಭಗೊಂಡ ಈ ಸಂಸ್ಕೃತಿ **ಶ್ರೀಶ್ರೀಪಾದರಾಯರು, ಶ್ರೀವ್ಯಾಸರಾಯರು, ಶ್ರೀವಾದಿರಾಜರು, ಶ್ರೀರಾಯರು, ಶ್ರೀಪುರಂದರದಾಸರು, ಶ್ರೀಕನಕದಾಸರು, ಶ್ರೀವಿಜಯದಾಸರು, ಶ್ರೀಜಗನ್ನಾಥದಾಸರೇ** ಮೊದಲಾದ ಸುಮಾರು 130ಕ್ಕೂ ಹೆಚ್ಚು ಹರಿದಾಸರಿಂದ ರಚನೆಗೊಂಡ ಸಂಪದ್ಭರಿತ ಸಾಹಿತ್ಯವಾಗಿದೆ. ಈ ಸಾಹಿತ್ಯದ ರಚನೆಗೆ ಪ್ರಮುಖ ಕಾರಣ ಆ ಕಾಲಘಟ್ಟದ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕವಾಗಿ ಆದ ಸ್ಥಿತ್ಯಂತರಗಳು. ಈ ನಾಡಿನ ಮೇಲೆ ಅನ್ಯಧರ್ಮೀಯರ ಆಕ್ರಮಣ, ಮತಾಂತರ, ಅತ್ಯಾಚಾರ–ಅನಾಚಾರ, ದುರಾಸೆ ಮುಂತಾದ ವಿಕೃತ ವರ್ತನೆ ಮತ್ತು ಮನಸ್ಸುಗಳಿಂದ ನಲುಗಿಹೋಗಿದ್ದ ಮನುಕುಲವನ್ನು ಇವುಗಳ ತೊಳಲಾಟಗಳಿಂದ ಹೊರತಂದು **ಉತ್ತಮ ಬದುಕಿಗೆ ಮಾರ್ಗದರ್ಶೀಯವಾದ ಜೀವನಾದರ್ಶಗಳನ್ನು ಅನುಭವದ ಉಪದೇಶಾಮೃತದ ಮೂಲಕ ಈ ನಾಡಿನ ಮನೆ–ಮನಗಳ ಭಾಷೆಯಾದ ಸರಳ ಕನ್ನಡದಲ್ಲಿ ನೀಡಿದ್ದು** ಈ ಪಂಥದ ಮತ್ತು ಸಾಹಿತ್ಯದ ಮಹತ್ಕಾರ್ಯ. ಈ ಹರಿದಾಸರು ಭಕ್ತಿ, ಈ ಪರಂಪರೆಯ ಮಹತ್ವ, ಆದರ್ಶ ಜೀವನ, ಕೌಟುಂಬಿಕ ಸಾಮರಸ್ಯದ ಬದುಕು, ಆತ್ಮ ಮತ್ತು ಡಂಬಾಚಾರದ ವಿಮರ್ಶೆ, ತತ್ತ್ವಾದರ್ಶ, ಬೇಕು–ಬೇಡಗಳ ಮಾರ್ಗದರ್ಶನ ಮುಂತಾದ **'ಸಭ್ಯ ಸಂಸ್ಕೃತಿ'**ಯ ಆಶಯಗಳನ್ನೊಳಗೊಂಡ ರಚನೆಗಳನ್ನು ಆಯಾ ಸಂದರ್ಭಕ್ಕೆ ಪ್ರತಿಸ್ಪಂದಿಯಾಗಿ ರಚಿಸಿ ಹಾಡಿದರು. ಇದು ಜನರ ದುರ್ಭರ ಬದುಕನ್ನು ಸಹ್ಯವಾಗಿಸಿತು. ಜನರ **ಜೀವನಪ್ರೀತಿಗೆ ಪ್ರೇರಣೆ ಮತ್ತು ಆಲಂಬನ**ಗಳನ್ನು ನೀಡಿತು. ಇಂತಹ ಮಹತ್ವಪೂರ್ಣ ಹರಿದಾಸಸಾಹಿತ್ಯದ ಪ್ರಮುಖ ನೇತಾರರಲ್ಲೊಬ್ಬರು, **ಶ್ರೀವಿಜಯನಗರ ಸಾಮ್ರಾಜ್ಯದ ಆರು ಜನ ಚಕ್ರವರ್ತಿ**ಗಳಿಗೆ ರಾಜಗುರುಗಳಾಗಿದ್ದ **ಶ್ರೀವ್ಯಾಸರಾಜಗುರುಸಾರ್ವಭೌಮರಿಂದ ದಾಸರೆಂದರೆ ಪುರಂದರ ದಾಸರಯ್ಯ ಎಂದೆನಿಸಿಕೊಂಡ ಶಿಷ್ಯರೂ**, ದಾಸಸಾಹಿತ್ಯದ **ಅಶ್ವಿನೀ ದೇವತೆ**ಗಳಲ್ಲಿ ಒಬ್ಬರು, **ಕರ್ನಾಟಕ ಸಂಗೀತ ಪಿತಾಮಹ**ರಾದ **ಶ್ರೀಪುರಂದರದಾಸರು**.

ಇವರು ರಚಿಸಿದ ಕೀರ್ತನೆಗಳ ಸಂಖ್ಯೆ **ನಾಲ್ಕು ಲಕ್ಷದ ಎಪ್ಪತ್ತೈದು ಸಾವಿರ** ಎಂದು ಹೇಳುತ್ತಾ ಬಂದಿದ್ದೇವೆ. ಆದರೆ ಈವರೆಗೂ ಪತ್ಯವಾಗಿ ಸಂಗ್ರಹಕಾರರು ಸಂಗ್ರಹಿಸಿದ ಕೀರ್ತನೆಗಳ ಸಂಖ್ಯೆ **ಮೂರು ಸಾವಿರವೂ** ದಾಟುತ್ತಿಲ್ಲ. ಅವೂ ಶುದ್ಧಪಾಠದಿಂದ ಕೂಡಿದೆಯೋ ಇಲ್ಲವೋ ಗೊತ್ತಿಲ್ಲ. ಈಗಿರುವ ಪ್ರಕಟಿತ ಸಂಗ್ರಹದಲ್ಲಿಯೂ ಅವರ ಅಂಕಿತವನ್ನು ಹೋಲುವ ಬೇರೆಬೇರೆ ಅಂಕಿತದ ರಚನೆಯ ಕೀರ್ತನೆಗಳೂ ಸೇರಿರಬಹುದು ಎಂಬುದು ತಜ್ಞರ ಅಭಿಮತ. ಅದೇನೇ ಇರಲಿ ಇಂತಹ ಹರಿದಾಸ ಸಾಹಿತ್ಯದಲ್ಲಿನ ಜೀವನಾದರ್ಶಗಳನ್ನು ಆಧುನಿಕ ಬದುಕಿನ ತೊಳಲಾಟದಲ್ಲಿ ಮಿಂದೇಳುತ್ತಿರುವ ನಮಗೆ, ನಮ್ಮೆಲ್ಲರ ಅಂಗೈಯಲ್ಲಿ ನಲಿದಾಡುತ್ತಿರುವ ಮೊಬೈಲ್, ಐಪಾಡ್, ಟ್ಯಾಬ್, ಲ್ಯಾಪ್‌ಟ್ಯಾಪ್ ಇನ್ನೂ ಮುಂತಾದ ಆಧುನಿಕ ತಂತ್ರಜ್ಞಾನ ಸಾಧನಗಳಲ್ಲಿ **ಶ್ರೀಪುರಂದರದಾಸರು** ರಚಿಸಿರುವ ಈವರೆಗೆ ಸಂಗ್ರಹಿಸಿದ ಕೀರ್ತನೆಗಳ ಸಾಹಿತ್ಯ; ಅವುಗಳ ಅರ್ಥಾನುಸಂಧಾನಕ್ಕೆ ಅನುಕೂಲವಾಗುವಂತೆ ಇರುವ ಶಬ್ದಾರ್ಥ ವಿವರಣೆ; ಈಗಾಗಲೇ ಸಂಗೀತದ ಮೂಲಕ ನಾಡಿನ ಸಂಗೀತಗಾರರು ಹಾಡಿ ಧ್ವನಿಮುದ್ರಿಕೆಯಾಗಿ ದಾಖಲಾಗಿರುವುದನ್ನು ಕೇಳಲು, ಅವುಗಳ ಕುರಿತು ವಿದ್ವಾಂಸರು ಸರಳ ಗ್ರಹಿಕೆಗೆ ಅರ್ಥವಾಗುವಂತೆ ನೀಡಿದ ಉಪನ್ಯಾಸದ ಆಡಿಯೋ ಅಥವಾ ವೀಡಿಯೋಗಳನ್ನು ಏಕತ್ರ ಸಂಗ್ರಹಿಸಿ ಆಸಕ್ತರಿಗೆ ಹುಡುಕಾಟಕ್ಕೆ ಸುಲಭವಾಗಿ ದೊರಕುವಂತಹ ಅಂತರ್ಜಾಲ ಮಾಧ್ಯಮದ ಮೂಲಕ ಬಿತ್ತರಿಸುವ ಕೆಲಸ ಈ ವರೆಗೂ ಆಗಿಲ್ಲ. ಇಂತಹ ಕಾರ್ಯ ಬಹು ಪರಿಶ್ರಮ, ಸಮಯ, ಸಹಕಾರ ಮತ್ತು ಹಣವನ್ನು ಅಪೇಕ್ಷಿಸುತ್ತದೆ.

ಈ ಒಂದು ಮಹತ್ಕಾರ್ಯವನ್ನು ತಮ್ಮ ಸ್ವ–ನಿವೃತ್ತಿಯ ನಂತರದ ಜೀವನದಲ್ಲಿ ನವ ಉತ್ಸಾಹಿಯಾಗಿ, ಪ್ರವೃತ್ತಿಯಾಗಿ ಕೈಗೆತ್ತಿಕೊಂಡು ಕಾರ್ಯನಿರ್ವಹಿಸುತ್ತಿರುವವರು ಮೂಲತಃ ಹರಪನಹಳ್ಳಿ – ಹೊಸಪೇಟೆಯ ದಂಡಿನ್ – ತಟ್ಟಿ ಕುಟುಂಬದ ವಾರಸುದಾರರಾದ, ಸದ್ಯ ಬೆಂಗಳೂರಿನಲ್ಲಿ ನೆಲೆಸಿರುವ ತಾಂತ್ರಿಕ ಅಭಿಯಂತರ ಶ್ರೀ ಡಿ.ಅನಂತರಾವ್ ಅವರು. ಸಾರ್ವಜನಿಕರಿಂದ ಈವರೆಗೂ ಯಾವುದೇ ಧನಾಪೇಕ್ಷೆ ಬಯಸದೆ ತಮ್ಮ ಶ್ರಮದ ದುಡಿಮೆಯಿಂದ ಬಂದ ಆದಾಯದಲ್ಲಿಯೇ ಕಳೆದ ಮೂರು ವರ್ಷಗಳಿಂದ ಹಲವು ಕಷ್ಟನಷ್ಟಗಳ ಮಧ್ಯೆ **www.purandaradasa.co.in** ಎಂಬ ವೆಬ್‌ಸೈಟನ್ನು ಸಿದ್ಧಪಡಿಸಿದ್ದು **2024 ಫೆಬ್ರವರಿ 9ರ** **ಶ್ರೀಪುರಂದರದಾಸರ ಆರಾಧನೆ**ಯಂದು ಹಂಪೆಯ **ಪುರಂದರಮಂಟಪ**ದಲ್ಲಿ ಅನಾವರಣ ಗೊಳಿಸಲು ಸನ್ನದ್ಧರಾಗಿದ್ದಾರೆ. ಅವರು ಈ ಸುಂದರ ವೆಬ್‌ಸೈಟ್‌ನ ರಚನೆಗೆ ಹಾಕಿರುವ ಶ್ರಮವನ್ನು ಬಹಳ ಹತ್ತಿರದಿಂದ ನೋಡಿರುವ ನನಗೆ ಅವರ ಈ ಕುರಿತಾದ ಶ್ರಮದ ಬಗ್ಗೆ ನನ್ನ ಮತ್ತು ಇನ್ನುಮುಂದೆ ವೆಬ್‌ಸೈಟನ್ನು ಬಳಸುವ ಬಳಕೆದಾರರ ಮಾತು ಒಂದೇ ಅದು **ಸಾರ್ಥಕ ಬದುಕಿನ ಶಾಶ್ವತ ಕಾರ್ಯದ ಈ ಪರಿಶ್ರಮಕ್ಕೆ ಶ್ರೀಪುರಂದರದಾಸರು ಮತ್ತು ಅವರ ಅಂತರ್ಯಾಮಿ ಶ್ರೀಪುರಂದರವಿಠಲ** ಸಕಲವನ್ನು ಇತ್ತು ಸನ್ಮಂಗಳವನ್ನುಟುಮಾಡಲಿ ಎಂಬ ಪ್ರಾರ್ಥನೆ. ಅವರ ಈ ಪರಿಶ್ರಮಕ್ಕೆ ಬೆಲೆಕಟ್ಟಲಾಗದು. ಆದರೆ ಈ ವೆಬ್‌ಸೈಟ್‌ನ ಬಳಕೆದಾರರು ಇದನ್ನು ಸಮರ್ಥವಾಗಿ ಬಳಸಿಕೊಂಡಾಗ ಶ್ರೀ ಡಿ.ಅನಂತರಾವ್ ಅವರ ಶ್ರಮವೂ ಸಾರ್ಥಕ. ಬಳಕೆದಾರರ ಜೀವನವೂ ಸುಕೃತ.

ಅಭಿಮಾನ ಪೂರ್ವಕ ಪ್ರಣಾಮಗಳೊಂದಿಗೆ,

ಬಿ.ಎಸ್. ಅನಿಲಕುಮಾರ್